ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯವು ಮೂಲ ದಾವೆ ನಂ 89/2014 ರಲ್ಲಿ ದಿನಾಂಕಃ 28-02-2024 ರಂದು ನೀಡಿರುವಂತಹ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ, ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಅಲ್ಲದೆ, ಈ ಮೇಲ್ಮನವಿಯಲ್ಲಿ ಮೇಲ್ಮನವಿದಾರರು ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 5 ರ ಅಡಿಯಲ್ಲಿ ಸಲ್ಲಿಸಿ, ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಗೆ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ. ಅಲ್ಲದೆ, ಮಧ್ಯಂತರ ಅರ್ಜಿ ಸಂಖ್ಯೆ -2 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 27 ರ ಅಡಿಯಲ್ಲಿ ಸಲ್ಲಿಸಿ ಹೆಚ್ಚುವರಿ ದಾಖಲೆ ಸಾಕ್ಷಿಯನ್ನು ಹಾಜರುಪಡಿಸಲು ಅನುಮತಿಸಬೇಕೆಂದು ಕೋರಿರುತ್ತಾರೆ. ಅದೇ ರೀತಿ ಮಧ್ಯಂತರ ಅರ್ಜಿ ಸಂಖ್ಯೆ-3 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 14 ನಿಯಮ 5 ರ ಅಡಿಯಲ್ಲಿ ಸಲ್ಲಿಸಿ, ಕಾಲಪರಿಮಿತಿಯ ಮೇಲೆ ವಿವಾದಾಂಶವನ್ನು ರಚಿಸಿ, ಅದರ ಮೇಲೆ ತೀರ್ಪು ನೀಡಲು ಆದೇಶಿಸಬೇಕೆಂದು ಮೇಲ್ಮನವಿದಾರರು ಕೋರಿರುವುದರಿಂದ ಹಾಗೂ ಎದುರುದಾರರು ಮಧ್ಯಂತರ ಅರ್ಜಿ ಸಂಖ್ಯೆ-4 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 13 ನಿಯಮ 9 ರ ಅಡಿಯಲ್ಲಿ ಸಲ್ಲಿಸಿ, ನಿ.ಪಿ 16 ಮತ್ತು 17 ರ ಮೂಲ ದಾಖಲೆಗಳನ್ನು ಹಿಂದಿರುಗಿಸಲು ಆದೇಶಿಸಬೇಕೆಂದು ಕೋರಿರುವುದರಿಂದ ಹಾಗೂ ಎದುರುದಾರರು/ವಾದಿಗಳು ದಾವಾ ಆಸ್ತಿಗೆ ತಮ್ಮನ್ನು ಮಾಲಕರೆಂದು ಘೋಷಿಸಬೇಕೆಂದು ಹಾಗೂ ದಾವಾ ಬಿ ತಪಶೀಲಿನ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ಆರೋಪಿಸಿ, ಸ್ವಾಧೀನವನ್ನು ಕೊಡಿಸಬೇಕೆಂದು ಕೋರಿದಂತಹ ವಾದಿಗಳ ದಾವೆಯನ್ನು ವಿಚಾರಣಾ ನ್ಯಾಯಾಲಯವು ಡಿಕ್ರಿಗೊಳಿಸಿರುವುದರಿಂದ, ಈಗ ಕೇವಲ ಮಧ್ಯಂತರ ಅರ್ಜಿ ಸಂಖ್ಯೆ -1 ರಿಂದ 4 ರ ಮೇಲೆ ಮಾತ್ರ ಉಭಯಪಕ್ಷಗಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸಿದ್ದು, ಆದರೆ ಮೇಲ್ಮನವಿಯ ಮೇಲೆ ತಮ್ಮ ವಾದ ಮಂಡಿಸಿಲ್ಲವಾದ ಕಾರಣ, ಉಭಯಪಕ್ಷಗಾರರ ಮಧ್ಯೆ ವಿವಾದದಲ್ಲಿರುವ ದಾವಾ ಬಿ ತಪಶೀಲಿನ ಆಸ್ತಿಯನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೋ ಅಥವಾ ಇಲ್ಲ ಎನ್ನುವುದನ್ನು ಈ ಮೇಲ್ಮನವಿಯಲ್ಲಿ ನಿರ್ಧರಿಸಲು ಮೇಲ್ಮನವಿಯ ಮೇಲೆ ವಾದಮಂಡನೆ ಅವಶ್ಯವಿರುತ್ತದೆ. ಆದ್ದರಿಂದ, ಮಧ್ಯಂತರ ಅರ್ಜಿ ಸಂಖ್ಯೆ-2 ರಿಂದ 4 ನ್ನು ಮೇಲ್ಮನವಿಯ ಮೇಲೆ ವಾದ ಕೇಳಿದ ನಂತರ ಇತ್ಯರ್ಥ ಪಡಿಸುವ ಅವಶ್ಯಕತೆ ಇರುತ್ತದೆ. ಅಲ್ಲದೆ, ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಇತ್ಯರ್ಥಪಡಿಸಲು ಸಹ ಉಭಯಪಕ್ಷಗಾರರ ಪರ ಸಂಪೂರ್ಣ ವಾದಮಂಡನೆ ಅವಶ್ಯವಾಗಿರುತ್ತದೆ. ಆದ್ದರಿಂದ, ಮಧ್ಯಂತರ ಅರ್ಜಿ ಸಂಖ್ಯೆ-1 ರಿಂದ 4 ನ್ನು ಇತ್ಯರ್ಥಪಡಿಸಲು, ಮುಖ್ಯ ಮೇಲ್ಮನವಿಯ ಮೇಲೆ ವಾದಮಂಡನೆ ಕೇಳುವುದು ಅವಶ್ಯವಾಗಿರುವುದರಿಂದ, ಈ

ಮಧ್ಯಂತರ ಅರ್ಜಿ ಸಂಖ್ಯೆ-1 ರಿಂದ 4 ನ್ನು ಇತ್ಯರ್ಥಪಡಿಸಲು ಮೇಲ್ಕಂಡವಿಯ ಮೇಲೆ ವಾದಮಂಡನೆ ಅವಶ್ಯವಾಗಿರುತ್ತದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹೊಸದುರ್ಗ.**